ಓ ಎಸ್ ನಂಬ್ರಃ 713/2023 ಪಿ ಡಬ್ಲ್ಯೂಃ 1

ದಿಃ 24-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಕ್ರಯದ ಕರಾರು ಪತ್ರ ಆದ ಸಂದರ್ಭದಲ್ಲಿ ನಾನು ದಾವಾ ಶೆಡ್ಯೂಲ್ ಆಸ್ತಿಯ ಸ್ವಾಧೀನಾನುಭವವನ್ನು ಪಡೆದುಕೊಂಡೆ. ನಾನು ದಾವಾ ಶೆಡ್ಯೂಲ್ ಆಸ್ತಿಯಲ್ಲಿ 2023 ನೇ ಇಸವಿಯವರೆಗೂ ಸ್ವಾಧೀನಾನುಭವವನ್ನು ಹೊಂದಿದ್ದೆ. ನಿಪಿ31 ರಲ್ಲಿ ದಾವಾ ಶೆಡ್ಯೂಲ್ ಆಸ್ತಿಯನ್ನು ನನ್ನ ಸ್ವಾ ಧೀನಾನುಭವಕ್ಕೆ ಬಿಟ್ಟು ಕೊಟ್ಟ ವಿಚಾರ ಬರೆದಿರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಆಸ್ತಿಯಲ್ಲಿರುವ ಮನೆಯ ನಂಬರ್ , ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕ ನನ್ನ ಹೆಸರಿನಲ್ಲಿದೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾ ಶೆಡ್ಯುಲ್ ಆಸ್ತಿಯ ಸ್ವಾಧೀನಾನುಭವವನ್ನು ನಾನು ಎಂದಿಗೂ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಯಾವುದೆ ಅಭಿವೃದ್ಧಿಯನ್ನು ಮಾಡಿರುವುದಿಲ್ಲಎಂದರೆ ಸಾಕ್ಷಿಯು ಸದರಿ ಆಸ್ತಿಗೆ ಕಲ್ಲು ಕಂಬ ಮತ್ತು ಮುಳ್ಳುತಂತಿಯನ್ನು ಹಾಕಿದ್ದೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ದಾಖಲೆ ಇದೆಯೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳು ಸುಳ್ಳು ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು. )

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ. ಎಫ್. ಸಿ., ಉಡುಪಿ.
(ಸಂಚಾರಿ ಪೀಠ ಬ್ರಹ್ಮಾವರ)

This is a True Copy of the Court Records Online. Authenticated @ districts.ecourtsindia.com/cnr/KAUP040026652023/truecopy/order-1.pdf

www.ecourtsindia.com